## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 04-11-2022

### ಗಾಂಧಿಗAಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 160/2022 ಕಲಂ 379 ಐಪಿಸಿ :-

ದಿನಾಂಕ 03/11/2022 ರಂದು 1300 ಗಂಟೆಗೆ ಫಿರ್ಯಾದಿ ರವಿ ತಂದೆ ಅಡೇಪ್ಪಾ ವಯ-32 ವರ್ಷ ಜಾ: ಕಬ್ಬಲಿಗೇರ ಉ: ಟೇಕ್ನೀಸನ ಕೇಲಸ ಸಾ: ಹಳ್ಳಿಖೇಡ (ಕೆ) ವಾಡಿ ಗ್ರಾಮ ತಾ: ಹುಮನಾಬಾದ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ಕಳೆದ 04 ವರ್ಷಗಳಿಂದಾ ಜಿ.ಟಿ.ಎಲ್. ಲಿಮೀಟೆಡ ಬೆಂಗಳೂರ ಕಂಪನಿಯಲ್ಲಿ ಟೇಕ್ನೀಸಿಯನ ಅಂತ ಕೇಲಸ ಮಾಡುತ್ತಿದ್ದೆನೆ ಸದರಿ ಕಂಪನಿಯು ಅಳವಡಿಸಿದ ಮೋಬೈಲ ಟಾವರಗಳ ಟೇಕ್ನೀಸಿಯನ ಅಂತ ಇದ್ದು, ಬೀದರ ತಾಲುಕಿನ ಅಮಲಾಪುರ ಗ್ರಾಮದಲ್ಲಿ ಶ್ರೀ ಎಂ.ಮೈನೋದ್ದಿನ ರವರ ಹೊಲ ಸರ್ವೆ ನಂ,67/1 ನೇದರಲ್ಲಿ ನಮ್ಮ ಕಂಪನಿಯಿAದ ಮೋಬೈಲ ಟಾವರ ಅಳವಡಿಸಿದ್ದು ಇರುತ್ತದೆ. ಸದರಿ ಟಾವರಗೆ ಮೇಲವಿಚಾರಕನಾಗಿ ನೋಡಿಕೊಳ್ಳುತ್ತೆನೆ. ಹಿಗುವಲ್ಲಿ ದಿನಾಂಕ 30/10/2022 ರಂದು ರಾತ್ರಿ ಸಮಯದಲ್ಲಿ ಯಾರೋ ಕಳ್ಳರು ಅಮಲಾಪುರ ಗ್ರಾಮದ ಮೋಬೈಲ ಟಾವರಗೆ ಅಳವಡಿಸಿದ ಅಮರೇಜ ಕಂಪನಿಯ 12 ಬ್ಯಾಟರಿಗಳು (ಸೇಲ್ಸ) ಅಂ.ಕಿ. 65000=00 ರೂ ನೇದವುಗಳು ಕಳವು ಮಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಮನ್ನಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 55/2022 ಕಂ 279, 304(ಎ) ಐಪಿಸಿ :-

ದಿನಾಂಕ 03/11/2022 ರಂದು 11.45 ಗಂಟೆಗೆ ಬೀದರ ಜಿಲ್ಲಾ ಸರಕಾರಿ ಅಸ್ಪತ್ರೆಯ ಪೊಲೀಸ್ ಓ.ಪಿ.ಯಿಂದ ವಾಹನ ಅಪಘಾತದ ಬಗ್ಗೆ ಮಾಹಿತಿ ಬಂದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ಮೃತ ರಾಜಕುಮಾರ ತಂದೆ ಮಲ್ಲಿಕಾರ್ಜುನ ಬೆಂಬ್ರೆ ವಯಃ 52 ವರ್ಷ ಸಾಃ ಬಸವೇಶ್ವರ ಕಾಲೋನಿ ಬೀದರ ಇತನ ಮೃತ ದೇಹ ನೋಡಿ ಅಲ್ಲಿಯೆ ಹಾಜರಿದ್ದ ಮೃತನ ಹೆಂಡತಿ ಶ್ರೀಮತಿ ರಾಧೀಕಾ ಗಂಡ ರಾಜಕುಮಾರ ಬೆಂಬ್ರೆ ಸಾಃ ಬಸವೇಶ್ವರ ಕಾಲೋನಿ ಬೀದರ ಇವರು ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ಇವರ ಗಂಡನಾದ ರಾಜಕುಮಾರ ರವರು ಬೀದರ ಡಿಸಿಸಿ ಬ್ಯಾಂಕನಲ್ಲಿ ಅಂದಾಜು 23 ವರ್ಷದಿಂದ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ದಿನಾಂಕ: 02/11/2022 ರಂದು ಡಿಸಿಸಿ ಬ್ಯಾಂಕ ಶಾಖೆ ಮನ್ನಳ್ಳಿಗೆ ವ್ಯವಸ್ಥಾಪಕರಾಗಿ ಮೇಲೆ ನೇಮಕ ಮಾಡಿದ್ದು, ಆದ್ದರಿಂದ ದಿನಾಂಕ: 03/11/2022 ರಂದು ಮುಂಜಾನೆ 09=00 ಗಂಟೆಗೆ ಮನೆಯಿಂದ ತಮ್ಮ ವಾಹನ ಸಂಖ್ಯೆ. ಕೆಎ-38/ಹೆಚ್-9125 ನೇದರ ಮೇಲೆ ಬೀದರ ದಿಂದ ಮನ್ನಳ್ಳಿಗೆ ಕೆಲಸಕ್ಕೆ ಹೋಗುವಾಗ ಬೀದರ-ಮನ್ನಳ್ಳಿ ರಸ್ತೆಯ ಮೇಲೆ ನಾಗೊರಾ ಸಮೀಪ ಹೋಗುವಾಗ ಎದುರಿನಿಂದ ಟ್ರಾö್ಯಕ್ಟರ್ ಚಾಲಕನು ತನ್ನ ಟ್ರಾö್ಯಕ್ಟರ್ ನಂ. ಕೆಎ-38/ಎ-3089 ನೇದ್ದನ್ನು ಅತಿ ವೇಗ ಹಾಗೂ ನಿಷ್ಕಾಳಜಿತನದಿಂದ ನಡೆಸಿಕೊಂಡು ಮೋಟಾರು ಸೈಕಲ್‌ಗೆ ಡಿಕ್ಕಿ ಮಾಡಿದ್ದರಿಂದ ತಲೆಗೆ ಭಾರಿ ಪೆಟ್ಟಾಗಿದ್ದರಿಂದ ಚಿಕಿತ್ಸೆ ಕುರಿತು ಬೀದರ ಸರಕಾರಿ ಆಸ್ಪತ್ರೆಗೆ 108 ಅಂಬುಲೆನ್ಸ್ ನಲ್ಲಿ ಗಣೇಶ ಕುಲಕರ್ಣಿ, ಹಾಗೂ ಗಣೇಶ ಕುಮಾರ ಸಾತೋಳಿಕರ್ ಕರೆದುಕೊಂಡು ಬಂದು ಸೇರಿಕ್ ಮಾಡಿರುತ್ತಾರೆ. ಮೋಟಾರು ಸೈಕಲ್ ಗೆ ಡಿಕ್ಕಿ ಮಾಡಿದ ಟ್ರಾö್ಯಕ್ಟರ್ ಚಾಲಕನ ಹೆಸರು ಮಹ್ಮದ ಸಲಾವೋದ್ದಿನ್ ತಂದೆ ಮಸ್ತಾನ ಅಲಿ ಮು|| ಯಾಕತಪೂರ ಅಂತಾ ಅನೀಲಕುಮಾರ ರವರಿಂದ ತಿಳಿದಿರುತ್ತದೆ. ಕಾರಣ ಗಂಡನಾದ ರಾಜಕುಮಾರ ರವರು ತಮ್ಮ ಮೋಟಾರು ಸೈಕಲ್ ಮೇಲೆ ಮನ್ನಳ್ಳಿಗೆ ಕೆಲಸಕ್ಕೆ ಹೋಗುವಾಗ ನಾಗೋರಾ ಸಮೀಪ ಬೀದರ-ಮನ್ನಳ್ಳಿ ರಸ್ತೆ ಮೇಲೆ 10=00 ಗಂಟೆಗೆ ಎದುರಿನಿಂದ ಟ್ರಾö್ಯಕ್ಟರ್ ಚಾಲಕನಾದ ಮಹ್ಮದ ಸಲಾವೋದ್ದಿನ್ ತಂದೆ ಮಸ್ತಾನ ಅಲಿ ಮು|| ಯಾಕತಪೂರ ಇವರು ತನ್ನ ಟ್ರಾö್ಯಕ್ಟರ್ ನಂ. ಕೆಎ-38/ಎ-3089 ನೇದ್ದನ್ನು ಅತೀ ವೇಗ ಹಾಗೂ ನಿಷ್ಕಾಳಜಿಯಿಂದ ನಡೆಸಿಕೊಂಡು ಬಂದು ನನ್ನ ಗಂಡನ ಮೋಟಾರು ಸೈಕಲ್‌ಗೆ ಡಿಕ್ಕಿ ಹೊಡೆದಿದ್ದರಿಂದ ನನ್ನ ಗಂಡನಿಗೆ ತಲೆಗೆ ಹಾಗೂ ಬಲ ಎದೆಗೆ ಭಾರಿ ಪೆಟ್ಟಾಗಿ ಆಸ್ಪತ್ರೆಗೆ ತರುವಾಗಲೇ ದಾರಿ ಮದ್ಯದಲ್ಲಿ ಮೃತ ಪಟ್ಟಿರುತ್ತಾರೆ. ಕಾರಣ ಟ್ರö್ಯಕ್ಟರ್ ಚಾಲಕನ ವಿರುದ್ದ ಕಾನೂನು ಕ್ರಮ ಕೈಕೊಳ್ಳಲು ವಿನಂತಿ ಅಂತ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.